ಅನೇಕರು ಮುಂದೆ ಬಂದರು. ಆದರೆ ಎಲ್ಲರ ಉದ್ದೇಶವೂ ಒಂದೇ. ಒಂದು ವರ್ಕ್ ಶಾಪ್‌ನಲ್ಲಿ ಒಂದೆರಡು ಪ್ರಸ್ತುತಿಯನ್ನು ಮಾಡುವಷ್ಟು ಸ್ಟೆಪ್ಸ್‌ಗಳನ್ನು ಇನ್‌ಸ್ಟಂಟ್ ಆಗಿ ಕಲಿಯುವುದು. ಆ ನೃತ್ಯದ ಹಿನ್ನೆಲೆಯನ್ನು ತಿಳಿದುಕೊಳ್ಳುವ ಆಸಕ್ತಿ ಇರುವವರು ಯಾರೂ ಮುಂದೆ ಬರಲಿಲ್ಲ. ದೇವಾಲಯ ನೃತ್ಯವು ಭರತನಾಟ್ಯ, ಮೋಹಿನಿಯಾಟ್ಟಂ ಅಥವಾ ಕಥಕ್ ಶೈಲಿಗೆ ಸೇರಿದ್ದಲ್ಲ. ಅದು ಸ್ವತಂತ್ರವಾಗಿ ಒಂದು ಶೈಲಿ ಎಂದು ಹೇಳಬಹುದು. ಅಲ್ಲಿ ಹೆಜ್ಜೆಗಾರಿಕೆಗಿಂತಲೂ ಭಕ್ತಿ ಮತ್ತು ಅರಿವಿಗೆ ಪ್ರಾಧಾನ್ಯ. ಇಂದ್ರದೇವನನ್ನೋ, ಅಗ್ನಿದೇವನನ್ನೋ ಸ್ತುತಿಸಿ ದೇವಾಲಯದ ಪ್ರಕಾರದಲ್ಲಿ ನೃತ್ಯ ಮಾಡುವಾಗ, ನೋಡಿದವರು ಸಭಾಂಗಣದ ಪ್ರೇಕ್ಷಕರಂತೆ ವಾಹ್ ವಾಹ್ ಎಂದೇನೂ ಹೇಳುವುದಿಲ್ಲ. ಅಲ್ಲಿ ನಮ್ಮ ಏಕಾಗ್ರತೆ ಎಷ್ಟು ಸ್ಪಷ್ಟವಾಗಿರುತ್ತದೆ ಎನ್ನುವುದು ಮುಖ್ಯ. ಈಗಿನ ತಲೆಮಾರಿನ ಮಕ್ಕಳಿಗೆ ನಿಜವಾಗಿಯೂ ಕಲಾಪ್ರಕಾರಗಳನ್ನು ಸಮರ್ಪಣಾ ಮನೋಭಾವದಿಂದ ಕಲಿಯುವುದು ಸವಾಲಿನ ಕೆಲಸವೇ. ಹಿಂದೆಲ್ಲ ಇಷ್ಟೊಂದು ಪರೀಕ್ಷೆಗಳು, ವೃತ್ತಿಯನ್ನು ಪಡೆಯಲೇಬೇಕು ಎಂಬ ಒತ್ತಡಗಳು ಇರಲಿಲ್ಲ. ನನಗೆ ನೃತ್ಯದಲ್ಲಿ ಆಸಕ್ತಿ ಇದೆ ಎಂದು ಅಮ್ಮನೇ ಗುರುತಿಸಿ ನನ್ನನ್ನು ಪ್ರೋತ್ಸಾಹಿಸಿ ಕಲಿಸಿದರು. ಇಂದಿನ ಪೋಷಕರು ಅಷ್ಟೊಂದು ಮುತುವರ್ಜಿ ವಹಿಸುತ್ತಾರೆಯೇ? ನೃತ್ಯ ತರಗತಿಗಳಿಗೆ ಬರುವ ವಿದ್ಯಾರ್ಥಿಗಳನ್ನು ಗಮನಿಸಿದರೆ, ಹೆಚ್ಚಿನವರು ಹತ್ತನೇ ತರಗತಿಗೆ ಬಂದ ಕೂಡಲೇ ಪರೀಕ್ಷೆ ತಯಾರಿ ಶುರು ಮಾಡುತ್ತಾರೆ. ನೃತ್ಯ ಬಿಟ್ಟುಬಿಡುತ್ತಾರೆ. ಯಾಕೆ ಎಲ್ಲರೂ ಪರೀಕ್ಷೆಗಳ ಗುಂಗಿಗೆ ಬಿದ್ದಿದ್ದಾರೆಂದು ಅಚ್ಚರಿಯಾಗುತ್ತದೆ ನನಗೆ.

◆ **ನೀವು ಬೆಂಗಳೂರಿಗೆ ಬಂದಾಗ ಮೋಹಿನಿಯಾಟ್ಟಂ ನೃತ್ಯ ಪ್ರಕಾರವನ್ನು ನಿಮ್ಮೊಡನೆ ಬೆಂಗಳೂರಿಗೆ ತಂದಿದ್ದೀರಿ. ಅನಂತರ ಬೆಂಗಳೂರು ಅಥವಾ ಕರ್ನಾಟಕದಲ್ಲಿ ಈ ನೃತ್ಯದ ಬೆಳವಣಿಗೆ ಹೇಗಾಯಿತು?**

ಬೆಂಗಳೂರಿನಲ್ಲಿ ಆಗ ನಾನೊಬ್ಬಳೇ ಮೋಹಿನಿಯಾಟ್ಟಂ ಕಲಾವಿದೆಯಾಗಿದ್ದೆ. ಆಗೆಲ್ಲ 'ಮೋಹಿನಿಯಾಟ್ಟಂ ಎಂದರೆ ಏನದು?' ಎಂದು ಜನರು



ಪ್ರಶ್ನಿಸುತ್ತಿದ್ದರು. ನಂತರದ ದಿನಗಳಲ್ಲಿ ಅನೇಕರು ಇದನ್ನು ಕಲಿತುಕೊಂಡರು. ಆದರೆ ನಾನು ಗಮನಿಸಿದ ಪ್ರಕಾರ, ಒಡಿಸ್ಸಿ ಮತ್ತು ಮೋಹಿನಿಯಾಟ್ಟಂ ನೃತ್ಯವು ಜನರನ್ನು ಇನ್ನೂ ಪರಿಣಾಮಕಾರಿಯಾಗಿ ತಲುಪಬೇಕು. ಕಲಾವಿದರು, ಗುರುಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೆ ಸಾಲದು, ಪೂರಕ ವಾತಾವರಣವನ್ನು ಕಲ್ಪಿಸುವವರು ಇರಬೇಕು. ಹಿನ್ನೆಲೆ ಸಂಗೀತ, ಪ್ರಸಾಧನ, ವೇದಿಕೆ, ಆಯೋಜಕರು... ಹೀಗೆ ಸಮಗ್ರ ವ್ಯವಸ್ಥೆಯಿದ್ದರೆ ಮಾತ್ರ ನೃತ್ಯವು ವಿಕಾಸ ಹೊಂದುವುದು.

◆ **ಹಿಂದೆಲ್ಲ ಇಂದಿನಷ್ಟು ಸೌಕರ್ಯಗಳು ಇರಲಿಲ್ಲ. ಆದರೂ ನಿಮ್ಮ ಪ್ರವಾಸ, ನೃತ್ಯಾಭ್ಯಾಸ,**